**ಪಶು ಚಿಕಿತ್ಸಾಲಯದ ಉನ್ನತೀಕರಣ ಹಾಗೂ ವೈದ್ಯರ ನೇಮಕ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 112 (241)

ಸದಸ್ಯರ ಹೆಸರು : ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ)

ಉತ್ತರಿಸುವ ಸಚಿವರು : ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

**ಪ್ರಶ್ನೆಗಳು:**

ಅ) ಮಂಡ್ಯ ಜಿಲ್ಲೆ ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿರುವ ಒಟ್ಟು ಜಾನುವಾರುಗಳ ಸಂಖ್ಯೆ ಎಷ್ಟು? (ಸಂಖ್ಯಾವಾರು ವಿವರ ಕೊಡುವುದು).

ಆ) ಶ್ರೀರಂಗಪಟ್ಟಣ ಕ್ಷೇತ್ರದಲ್ಲಿರುವ ಒಟ್ಟು ಹಸುಗಳು, ಕುರಿ, ಮೇಕೆ ಹಾಗೂ ಇತರೆ ಜಾನುವಾರುಗಳ ಸಂಖ್ಯೆ ಎಷ್ಟು? (ಸಂಖ್ಯಾ ವಿವರ ನೀಡುವುದು).

ಇ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿರುವ ಅರಕೆರೆ ಪಶು ಚಿಕಿತ್ಸಾಲಯಕ್ಕೆ ಒಳಪಡುವ ಗ್ರಾಮಗಳೆಷ್ಟು; ಸದರಿ ಚಿಕಿತ್ಸಾಲಯವನ್ನು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ / ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಶ್ರೀರಂಗಪಟ್ಟಣ ಕ್ಷೇತ್ರದಲ್ಲಿರುವ ಅರಕೆರೆ ಪಶು ಚಿಕಿತ್ಸಾಲಯದಲ್ಲಿ ಪ್ರತಿನಿತ್ಯ ಚಿಕಿತ್ಸೆಗೊಳಪಡುವ ಜಾನುವಾರುಗಳು ಹಾಗೂ ಸಾಕುಪ್ರಾಣಿಗಳು ಎಷ್ಟು (ಸಂಖ್ಯಾ ವಿವರ ಒದಗಿಸುವುದು)

ಉ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿರುವ ಅರಕೆರೆ ಪಶು ಚಿಕಿತ್ಸಾಲಯದಲ್ಲಿ ಕಳೆದ 2 ವರ್ಷಗಳಿಂದಲೂ ವೈದ್ಯಾಧಿಕಾರಿಗಳ ಹುದ್ದೆ ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, ಸದರಿ ಪಶು ಚಿಕಿತ್ಸಾಲಯಕ್ಕೆ ಖಾಯಂ ಪಶು ವೈದ್ಯಾಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಇಲ್ಲದಿದ್ದಲ್ಲಿ ಕಾರಣಗಳೇನು?

**ಉತ್ತರಗಳು:**

ಅ) ಮಂಡ್ಯ ಜಿಲ್ಲೆಯಲ್ಲಿ 2007ರ ಜಾನುವಾರು ಗಣತಿಯ ಪ್ರಕಾರ ಒಟ್ಟು 1190253 ಜಾನುವಾರು ಹಾಗೂ 1625674 ಕುಕ್ಕುಟಗಳು ಇರುತ್ತವೆ; ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದಲ್ಲಿ 82433 ಜಾನುವಾರು ಹಾಗೂ 40484 ಕುಕ್ಕುಟಗಳು ಇರುತ್ತವೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಆ) ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದಲ್ಲಿ 82433 ಜಾನುವಾರು ಹಾಗೂ 40484 ಕುಕ್ಕುಟಗಳು ಇರುತ್ತವೆ. ಸಂಖ್ಯಾವಾರು ವಿವರ ಅನುಬಂಧ–1ರಲ್ಲಿ ನೀಡಿದೆ.

ಇ) ಅರಕೆರೆ ಪಶು ಚಿಕಿತ್ಸಾಲಯಕ್ಕೆ ಒಳಪಡುವ ಗ್ರಾಮಗಳು – 17.
ಈ ಪಶು ಚಿಕಿತ್ಸಾಲಯವನ್ನು ಪಶು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

ಈ) ಅರಕೆರೆ ಪಶು ಚಿಕಿತ್ಸಾಲಯದಲ್ಲಿ ಪ್ರತಿನಿತ್ಯ ಚಿಕಿತ್ಸೆಗೊಳಗಾಗುವ
1. ರಾಸುಗಳ ಸರಾಸರಿ ಸಂಖ್ಯೆ : 35 ರಿಂದ 40
2. ಸಾಕುಪ್ರಾಣಿಗಳ ಸಂಖ್ಯೆ : 3 ರಿಂದ 4.

ಉ) ಬಂದಿದೆ. ಆದರೆ ಅರಕೆರೆ ಪಶು ಚಿಕಿತ್ಸಾಲಯದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕೋಡಿಯಾಲ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕರಿಗೆ ಹೆಚ್ಚುವರಿ ಪ್ರಭಾರ ನೀಡಲಾಗಿದೆ. ಹೀಗಾಗಿ ರಾಸುಗಳ ಚಿಕಿತ್ಸೆಗೆ ತೊಂದರೆ ಆಗಿರುವುದಿಲ್ಲ.

ಊ) 2009ರಲ್ಲಿ ಸರ್ಕಾರವು 487 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲು ವಿಶೇಷ ನೇಮಕಾತಿ ನಿಯಮದಡಿ ಅನುಮತಿ ನೀಡಿರುತ್ತದೆ. ಇದರಲ್ಲಿ ಮೊದಲ ಹಂತದಲ್ಲಿ 211 ಪಶು ವೈದ್ಯಾಧಿಕಾರಿ ಹುದ್ದೆಗಳನ್ನು ದಿನಾಂಕ 15.11.2010ರಂದು

ನೇಮಕಾತಿ ಮಾಡಲಾಗಿರುತ್ತದೆ. 2ನೇ ಹಂತದಲ್ಲಿ 136 ಪಶು ವೈದ್ಯಾಧಿಕಾರಿಗಳನ್ನು ದಿನಾಂಕ 20.12.2011ರಂದು ನೇಮಕಾತಿ ಮಾಡಲಾಗಿರುತ್ತದೆ. ಉತ್ತರ ಕರ್ನಾಟಕದ ಭಾಗದಲ್ಲಿ ಪಶು – ವೈದ್ಯಾಧಿಕಾರಿಗಳ ಹುದ್ದೆಗಳು ಅತಿ ಹೆಚ್ಚು ಖಾಲಿ ಇರುವ ಜಿಲ್ಲೆಗಳಿಗೆ ನಂಜುಂಡಪ್ಪ ಆಯೋಗದ ವರದಿ ಆಧರಿಸಿ ಆದ್ಯತೆ ಮೇರೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಉಳಿದಂತೆ ರಾಜ್ಯದಲ್ಲಿ ಖಾಲಿ ಇರುವ 340 ಪಶು ವೈದ್ಯಾಧಿಕಾರಿಗಳ ಹುದ್ದೆಗಳಿಗೆ ವಿಶೇಷ ನೇಮಕಾತಿ ನಿಯಮದಡಿ ನೇಮಕಾತಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಅರಕೆರೆ ಪಶು ಚಿಕಿತ್ಸಾಲಯದಲ್ಲಿ ಖಾಲಿ ಇರುವ ಪಶು ವೈದ್ಯಾಧಿಕಾರಿ ಹುದ್ದೆಯನ್ನು ಅಭ್ಯತೆಯ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ರಮೇಶ್ ಬಂಡಿಸಿದ್ದೇಗೌಡ, ಮಾನ್ಯ ಶಾಸಕರು, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ಅವರ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ 241 ಕ್ಕೆ ಮಾಹಿತಿ**

**2007ರ ಜಾನುವಾರು ಗಣತಿಯಂತೆ ಮಂಡ್ಯ ಜಿಲ್ಲೆ ಮತ್ತು ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದಲ್ಲಿರುವ ಜಾನುವಾರುಗಳು ಮತ್ತು ಕುಕ್ಕುಟಗಳ ಸಂಖ್ಯೆ**

| | ದನಗಳು | ಎಮ್ಮೆ | ಕುರಿ | ಆಡು | ಹಂದಿ | ನಾಯಿ | ಇತರೆ | ಒಟ್ಟು | ಕೋಳಿ |
|---|---|---|---|---|---|---|---|---|---|
| ಮಂಡ್ಯ ಜಿಲ್ಲೆ | 349977 | 168925 | 382561 | 244323 | 6878 | 37338 | 251 | 1190253 | 1625574 |
| ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರ | 33518 | 5528 | 19660 | 16702 | 229 | 6785 | 11 | 82433 | 40484 |